DOC-34
T-P-2

Regd. No.BG 182

27 – February 1969

ಗೋ ಮಾತಾಕೀ ಜೈ

ಭಾರತದ ಆದ್ಯಂತ ಗೋವಧೆಯು
ಶಾಸನಬದ್ಧವಾಗಿ
ನಿರೋಧವಾಗಲಿ

Cow Slaughter should be
banned immediately-

19 ನೇ ವರ್ಷ

ಶ್ರೀ ಗೋರಕ್ಷಣಿ
GORAKSHANA

ಸಂಪಾದಕರು : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್

Please help in every w...
This Humanitarian Propaganda Paper

★

ಗೋರಕ್ಷಣಾ, ಅಹಿಂಸಾ
ಪ್ರಚಾರಪತ್ರಿಕೆ

ವಿನಂತಿ– ಸಕಲರೀತಿಯಲ್ಲೂ ನೆರವು ನೀಡಿ
ಬಿಡಿ ಪ್ರತಿ 2 ಪೈಸೆ

ಗೋಹತ ನಿರೋಧ ಚಳುವಳಿ

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವನನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶಿನ್ಯಾರವರು, ಶ್ರೀ ಎಂ. ಬಿ. ಬಸವಯ್ಯನವರು. ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ.ಸಿ.ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಕೋ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವದೆಂದು ಆಶಿಸಿ, ಕೃತಜ್ಞತಾಪೂರ್ವಕವಂದಿಸುತ್ತೇನೆ

ಸಂಪಾದಕ "ಸತ್ಯವಾದಿ"
ಚಾಮರಾಜಪುರಂ, ಮೈಸೂರು 4.

ಕರುಗಳಿಗೆ ಮೇವು

ಹರಿಯಾಣ ಪ್ರಾಂತ್ಯದ ರಾಷ್ಟ್ರೀಯ ಡೈರಿ ಅನುಸಂಧಾನ ಪ್ರಕಾರ ' ಕರುಗಳ ಮೇವು" ನ್ನೂ ಹಾಲಿನ ಅಥವಾ ಕೆನೆ ತೆಗೆದ ಹಾಲಿನ ಬದಲಾಗಿ ಕೊಟ್ಟರೆ ಹಾಲನ್ನು ತಯಾರಿಸಲು ಆಗುವ ಖರ್ಚನ್ನು ಕಡಮೆ ಮಾಡಬಹುದು. (ಫಾರಂ ನ್ಯೂಸ್)

★

ಜಾನುವಾರು ಪ್ರದರ್ಶನ

ಮುಖ್ಯ ಮಂತ್ರಿಗಳು ಹಾಸನದಲ್ಲಿ ನಡೆದ 56 ನೆಯ ಜಾನುವಾರು ಪ್ರದರ್ಶನದಲ್ಲಿ ವಿಜೇತರಾದವರಿಗೆ ಬಹುಮಾನ ವಿತರಣೆ ಮಾಡುತ್ತಾ, ಹೆಚ್ಚು ಹಾಲು ಕೊಡುವಂತಹ ತಳಿಯ ಜಾನುವಾರುಗಳ ಸಂಪತ್ತನ್ನು ಹೆಚ್ಚಿಸಲು ರೈತರು ಆಸಕ್ತಿ ವಹಿಸಬೇಕೆಂದು ಕರೆಯಿತ್ತರು — ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಪಶುಸಂಗೋಪನ ಸಚಿವ ಶ್ರೀ ಶಂಕರರಾವ್‌ರವರು– ಪುಷ್ಟವಾಗಿ ಬೆಳೆದ ಪ್ರತಿಯೊಂದು ಹಸು ಮತ್ತು ಎಮ್ಮೆಯೂ ಒಂದೊಂದು ಸಣ್ಣ ಕೈಗಾರಿಕೆ ಇದ್ದಂತಾದ ಕಾರ್ಖಾನೆ ; ಪಶುಪಾಲನೆ ರೈತರಿಗೆ ಸ್ವಯಂಸಾಯದಷ್ಟೇ ಪ್ರಧಾನವಾದ ವೃತ್ತಿ, ಎಂದು ಹೇಳಿದರು (ಜನಪದ)

○

ಗೋರಕ್ಷಣೆಯ ಆದೇಶ

ದೇಶದ ರಾಷ್ಟ್ರೀಯ ಹೆಗ್ಗುರುತುಗಳು, ಮಾನಬಿಂದುಗಳು, ಸಂಕೇತಗಳು ಸುರಕ್ಷಿತವಾಗಿರುವುದು ಸ್ವಾತಂತ್ರ್ಯದ ಒಂದು ಲಕ್ಷಣ. ಗೋಮಾತೆ ಭಾರತದ ರಾಷ್ಟ್ರೀಯ ಮಾನಬಿಂದು. ಗೋಸಂಪತ್ತು ಕೃಷಿ ಮೂಲ ಭಾರತದ ಜೀವನಾಧಾರ. ಗೋಕ್ಷೀರ ನಮ್ಮ ನಾಡಿನ ಜನಾಂಗದ ಶರೀರ ಕ್ಷಮತ್ತು ಬುದ್ಧಿಬಲದ ಪೌಷ್ಟಿಕ ಆಹಾರ. "ಗೋಕುಲ"ವನ್ನು ಜನಜೀವನ ಅಭಿವೃದ್ಧಿಯ ಕಾರ್ಯಾಂಬಿಕ ಭಾಗ. ಆದುದರಿಂದ ಸ್ವರಾಜ್ಯ ಬಂದೊಡನೆ ಭಾರತದಲ್ಲಿ ಸಂಪೂರ್ಣ ಗೋಹತ್ಯ ನಿಷೇಧ ಕಾನೂನನ್ನು ಜಾರಿಗೆ ತರುವುದಾಗಿ ಸ್ವಾತಂತ್ರ್ಯ ಹೋರಾಟದ ನಾಯಕರು ಆಶ್ವಾಸನೆ ನೀಡಿದ್ದರು ಆದರಂತೆಯೇ ಭಾರತದ ಸಂವಿಧಾನದಲ್ಲಿ ಈ ಕಾನೂನು ಆಗಬೇಕೆಂಬ ಆದೇಶವನ್ನು ಕೊಡಲಾಯಿತು. (ವಿಕ್ರಮ)

★

ಕರುಗಳ ಪೆರವಣಿಗೆ

ಬಂಗಾರಪೇಟೆ— ಈಚೆಗೆ ಬುಸಿಕೋಟೆಯಿಂದ ಕರುಗಳ ಮೆರವಣಿಗೆ ನಡೆಯಿತು

ಗೋಹತ್ಯ ನಿಷೇಧ ಚಳವಳಿ

ನವದೆಹಲಿ— ಸರಕಾರವು ಗೋಹತ್ಯವನ್ನು ಪ್ರತಿಬಂಧಿಸದಿದ್ದರೆ, ಗೋರಕ್ಷಣ ಸಮಿತಿಯು ಹೊಸ ಚಳವಳಿ ಹೂಡುವುದೆಂದು ಸಮಿತಿ ಅಧ್ಯಕ್ಷರಾದ ಶ್ರೀ ಪೂರಿ ಜಗದ್ಗುರುಗಳು ಹೇಳಿದರು.

★

ಗೋಪಾಲನೆಯಾಗಬೇಕು

ಬನ್ನೂರಿನ ಹೇಮಾದ್ರಿ ಬಾ ಜಾತ್ರೆಯಲ್ಲಿ ಪ್ರದರ್ಶನಕ್ಕೆ ಬಂದಿದ್ದ ಉತ್ತಮ ರಾಸುಗಳಿಗೆ ಬಹುಮಾನ ವಿನಿಯೋಗ ಮಾಡುತ್ತಾ, ವಾರ್ತಾ ಮಂತ್ರಿ ಶ್ರೀ ರಾಜಶೇಖರಮೂರ್ತಿಯವರು– ಕೃಷಿ ಪ್ರಧಾನವಾದ ನಮ್ಮ ದೇಶದಲ್ಲಿ ಅಗತ್ಯವಾಗಿ ಬೇಕಾಗಿರುವ ಗೋವುಗಳನ್ನು ಸಂರಕ್ಷಣೆ ಮಾಡುವುದಲ್ಲದೆ ಗೋಸಂಪತ್ತು ಅಭಿವೃದ್ಧಿಯ ಕಡೆ ಶ್ರಮಿಸಬೇಕೆಂದೂ, ರೈತನ ವ್ಯವಸಾಯಕ್ಕೆ ಬೆನ್ನೆಲಬಿನಂತಿರುವ ಗೋವುಗಳ ಪಾಲನೆಗೆ ರೈತರು ಗಮನಕೊಡಬೇಕೆಂದೂ ಹೇಳಿದರು.

○

ಸ್ವಾತಂತ್ರ್ಯ ಪೂರ್ವದಿಂದಲೂ....

ಪ್ರಥಮ ಸ್ವಾತಂತ್ರ್ಯ ಸಮರದ ಕಿಡಿ 1857 ರಲ್ಲಿ ಹಾರಿತು. ಗೋಮಾಂಸ ಮುಟ್ಟಲು ಭಾರತದ ಸೈನಿಕರು ನಿರಾಕರಿಸಿ ಪರಕೀಯರ ಆಳ್ವಿಕೆಯನ್ನು ಅಂತ್ಯಗೊಳಿಸುವುದಾಗಿ ಅವರು ಪ್ರತಿಜ್ಞೆ ತೊಟ್ಟರು. ಅಂದಿನಿಂದ ಗೋರಕ್ಷಾ ಚಳವಳಿ ಸತತವಾಗಿ ನಡೆದುಬಂದಿದೆ. ಗೋರಕ್ಷಣೆ ಕಾಂಗ್ರೆಸ್ ಕಾರ್ಯಕರ್ತರ ರಚನಾತ್ಮಕ ಕಾರ್ಯಗಳಲ್ಲೊಂದು. ಮಹಾತ್ಮಾಜೀ ಗೋಸೇವಾ ಸಂಘ ಸ್ಥಾಪಿಸಿದ್ದು ಈ ಚಳುವಳಿಯ ಅಂಗವಾಗಿ. ಇನ್ನೂ ಅಪೇಕ್ಷಿತ ಕಾನೂನು ಆಗಿಲ್ಲವಾದ್ದರಿಂದ ಇಂದಿಗೂ ಆ ಚಳವಳಿ ಮುಂದುವರಿದಿದೆ. (ವಿಕ್ರಮ)

★

Save the Cow

The cow is the mother of Rudras, the daughter of Vasus and the sister of Adityas. The cow is the only source of milk and ghee which serve as nectar (Amrit).

We say it is a crying shame that cows and bullocks and calves hould be slaughtered in the country by the hundred thousand every year. Government should hang down its head in shame for its failure to respect national sentiment twenty years after it assumed power.

The constitution with its directive principle on cowprotection (Art. 48) was adopted sixteen years ago : but to this day the cow is not protected in many States.

Article 48 itself is faultily drafted that so called useless cattle can be slaughtered even if there is a cow-slaughter ban law.

The demand of the people therefore, is that Art. 48 should be amended to put a total ban on cattleslaughter. Their second demand is that under the amended article the centre should avail of Art. 249 to pass a Central Law on the subject [even if it is accepted to be a State Subject] so that errant States may not go their wayward way in search of communal votes.

(Organiser).

ಅಹಿಂಸೋಪರಮೋಧರ್ಮಃ

ಎಂಬುದು ಇಂದಿನ ಮಾತಲ್ಲ ; ವೇದಗಳ ಕಾಲದ ಮಾತಾಗಿದೆ. ಇದನ್ನು ಪಾಲಿಸು ವುವಾರತೀಯರಾದ ನಮ್ಮೆಲ್ಲರ ಕರ್ತವ್ಯ. ಅಶೋಕ ಚಕ್ರವರ್ತಿಯು ತನ್ನ ಆಡಳಿತದಲ್ಲಿ ಪಶುಪಕ್ಷಿ ಆದಿಯಾಗಿ ಯಾವ ಜೀವಜಂತುಗಳಿಗೂ ಹಿಂಸೆಯಾಗದಂತೆ ನೋಡಿಕೊಂಡುರಾಜ್ಯವಾಳಿ ಕೀರ್ತಿಶೇಷನಾದನು. ಮಹಾತ್ಮಾ ಗಾಂಧಿಯವರೂ ಕೂಡ ಇವನ್ನು ಪಾಲಿಸಿಕೊಂಡುಬಂದೇ ಭಾರತವನ್ನು ಸ್ವತಂತ್ರವನ್ನಾಗಿ ಮಾಡಿ ನನ್ಯ ಸೈಗಿತ್ತು ಅಮರರಾದರು.

ಅಶೋಕನು ಒಂದು ವೈದ್ಯಶಾಲೆಯಲ್ಲಿ. ರೋಗಿಯೊಬ್ಬನಿಗೆ ಹುಣ್ಣಿನ ಚಿಕಿತ್ಸೆ ಯಾಗುವಾಗ, ರೋಗಿಗಾಗುತ್ತಿದ್ದ ಹಿಂಸೆಯನ್ನು ಕಂಡುಮರುಗಿ, ಶಸ್ತ್ರಚಿಕಿತ್ಸೆ ಹೊರತು, ಗುಣಮಾಡಲಾಗುವುದಿಲ್ಲವೇ ಎಂದು ವೈದ್ಯರನ್ನು ಕೇಳಲು, ಇದು ಕೆಟ್ಟ ಹುಣ್ಣು, ಇದು ಹೊರತು ಬೇರೆ ಮಾರ್ಗವೇ ಇಲ್ಲವೆಂದರು

ಅಶೋಕನು ಅಷ್ಟಕ್ಕೆ ಸುಮ್ಮನಾಗದೆ ತನ್ನ ಜ್ಞೇಯದ ವೈದ್ಯರನ್ನೆಲ್ಲಾ ಕರೆಸಿ, ವಿಚಾರಿಸಲಾಗಿ ಒಬ್ಬ ಧನ್ವಂತರಿ ವೈದ್ಯನು ಗಿಡಗಳು ಲಿಕೆಗಳಿಂದಲೇ ರೋಗಿಗೆ ಸೋವಾಗದಂತೆ ವಾಸಿಮಾಡಲು ಒಪ್ಪಿ, ಒಂದು ವಾರದ ಚಿಕಿತ್ಸೆಯಿಂದಲೇ ಗುಣಪಡಿಸಿದನು. ಚಕ್ರವರ್ತಿಯು ಸೋಡಿ ಗಾಯದ ಗುರುತೂ ಇಲ್ಲದಿರುವುದನ್ನು ಕಂಡು, ಸಂತೋಷಪಟ್ಟು ವೈದ್ಯನಿಗೆ ಬಹುಮಾನವಿತ್ತನು. ಅಂದಿನಿಂದ ತನ್ನ ದೇಶದಲ್ಲಿ ಧನ್ವಂತರಿ ವೈದ್ಯಶಾಲೆಗಳು ಹೆಚ್ಚಾಗುವಂತೆ ಏರ್ಪಡಿಸಿ, ರೋಗನಿವಾರಣೆಗೂ ಶಸ್ತ್ರ ಚಿಕಿತ್ಸೆ ಕೂಡದೆಂದೂ, ಬುದ್ಧಿಗೆಡಿಸುವ ಅಮಲು ಸೇವನೆಯು ಔಷಧಿರೂಪದಲ್ಲಿಯೂ ಭಾರತವಲ್ಲಿರಕೂಡದೆಂದು ಆಜ್ಞೆ ಮಾಡಿದನು. ತನ್ನ ರಾಜ್ಯದಲ್ಲಿ ಪ್ರಾಣಿಹಿಂಸೆ ಮಾಡಿದವರಿಗೆ ಕ್ರೂರದಂಡನೆಯನ್ನು ವಿಧಿಸುತ್ತಿದ್ದುದರಿಂದ, ಹಿಂಸೆಗೆ ಇಡೀ ಭಾರತವೇ ದೂರವಾಗಿತ್ತು ; ದೇಶವೂ ಸಂಪತ್ಸಂವೃದ್ಧಿಯಾಗಿತ್ತು.

ಪೂಜ್ಯ ಬಾಪೂಜಿಯವರು, ಗೋಮಾಂಸಭಕ್ಷಣೆಯಿಂದ ಜನರಲ್ಲಿ ಕ್ರೂರ ಗುಣವುಂಟಾಗುವುದರಿಂದ, ಅಮಲು ಸೇವನೆಯಿಂದ ಬುದ್ಧಿಯು ಕೆಡುವುದರಿಂದಲೂ ಇವೆರಡೂ ಉಪಯೋಗಿಸಿದವನಿಗೆ ಮಾತ್ರವಲ್ಲದೆ, ದೇಶಕ್ಕೂ ಹಾನಿಕರವೆಂದು ಖಂಡಿಸಿದರು. ಸ್ವತಂತ್ರ ಭಾರತದಲ್ಲಿ ಸರಕಾರವು ಮಹತ್ವ ಕೊಟ್ಟಿರುವುದು ಶೋಚನೀಯವಾಗಿದೆ.

ತ್ರಿವರ್ಣಧ್ವಜದ ಮಧ್ಯೆ ಅಶೋಕ ಚಕ್ರವು ಕಂಗೊಳಿಸುತ್ತಿರುವ ದೇವಭೂಮಿಯಾದ ಭಾರತದಲ್ಲಿ ಇನ್ನಾದರೂ ಹಿಂಸಾಕೃತ್ಯವು ದೂರವಾಗಿ, ಗೋಮಾತೆಯ ರಕ್ಷಣೆಯಾಗಲಿ. ಗೋಪಾಲನು ಸರ್ವರಿಗೂ ಒಳ್ಳೇ ಬುದ್ಧಿ ಕೊಡಲಿ. ಜೈ ಹಿಂದ್.

ಬಿ. ಜಿ. ಶಾಸ್ತ್ರಿ, ಗ್ರಂಥಕರ್ತರು ಮತ್ತು ಜ್ಯೋತಿಷ್ಯರು
180 ಗೌರೀಶಂಕರ ನಿಲಯ, ವಿದ್ಯಾರಣ್ಯಪುರಂ, ಮೈಸೂರು 4.

Cow laughter should be banned Immediately



Protectthe Cow

ವುಡ್‌ಲ್ಯಾಂಡ್ಸ್ 28-2-69 ರಿಂದ

ಅನೋಘ ಆರಂಭ

— ಚಿತ್ತಾಕರ್ಷ ಸಾಂಸಾರಿಕ ಹಿಂದಿ ಚಿತ್ರ —

ಘರ್ ಕ ಚಿರಾಗ್

ಪಾತ್ರ— ಧರ್ಮೇಂಧರ್, ಬಿಶ್ವಜಿತ್, ವಹಿದಾ ರಹಿಮಾನ್,
ಬಾಲರಾಜ್ ಸಹಾನಿ, ದೇವ್ ಕುಮಾರ್
ನಿರ್ದೇಶನ : ಜಗದೀವ್ — ಸಂಗೀತ : ಮದನ್ ಮೋಹನ್
[ದಿನ 3 ಪ್ರದರ್ಶನಗಳು]

ಅಪೆರಾ— 28-2-69 ರಿಂದ

— ಅತ್ಯಮೋಘ ಹಿಂದಿ ಚಿತ್ರ —

ಪೂರ್ ವಾರ್

ಮನರಂಜನ ತೆರಿಗೆ ಮನ್ನಾ ಮಾಡಿದೆ ಪೂರ್ಣರಂಜಿತ

ಪಾತ್ರ : ಜಿತೇಂದ್ರ ನಂದ, ರಾಜೇಂದ್ರನಾಥ್, ಓಂ ಪ್ರಕಾಶ್
.... ದಿನವಹಿ 3 ಆಟಗಳು ....

Quality Printing — Neat Binding

Lakshminarasimha Press

Sivarampet, Mysore

SHAKTI
SUDHA

A Superb Tonic

Help The Gorakshana

ಆತೋಡ ವಿಜೆನ್‌ಸೀನ್

ಲಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು
ಎಲ್ಲ ವಿಧ ಛಾಯಾಗ್ರಹಣದ ಪೊಷಧಗಳನ್ನೂ ದೊರೆಯುವ ಕಡೆ

Edited, Printed & Published by Dharmaprachara Niraia
M S Krishna Rao (Proprietor) at the Satvaved Press
Chamarajapuram, Mysoe 4